Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 30 ಸಂಚಿಕೆ 268 | ಗುರುವಾರ 19—6—47 | ಬಿಡಿ ಪ್ರತಿ 3 ಪೈ

ಹೊಸ ಅವಕಾಶಗಳು

(ಜೆ. ಸಿ. ಕುಮಾರಪ್ಪ)

ರಾಜಕೀಯ ಆಂದೋಳನೆಗೆ ಅವಶ್ಯಕವಾದ ಗುಣ ಸಂಪತ್ತು ಬೇರೆ, ನಿರ್ಮಾಣ ಕೃಷಿಗೆ ಬೇಕಾದ ಗುಣವಿಶೇಷಗಳು ಬೇರೆ. ಸಾಂಘಿಕ, ಆರ್ಥಿಕ, ಆರೋಗ್ಯ, ವಿದ್ಯಾಭ್ಯಾಸ, ನೊದಲಾದ ನಾನಾ ಬಗೆಯ ಕಾರ್ಯಗಳಿಗೆ ಸಿದ್ಧನಾಗಿ ಗ್ರಾಮ ಸೇವೆಯಲ್ಲಿ ನಿರಂತರ ಕೃಷಿಯನ್ನು ನಿರ್ವಹಿಸುವ ಭಾರವನ್ನು ಮೇಆ ಹಾಕಿಕೊಳ್ಳುವುದಕ್ಕೆ ಮುಂಚೆ ತಕ್ಕ ತರಬೇತನ್ನು ಹೊಂದಬೇಕು. ಇನ್ನು ಕಾಲಹರಣ ಮಾಡದೆ ತರಬೇತು ತರಗತಿಗಳನ್ನು ಆಯಾ ಸಂಘಗಳು ಏರ್ಪಾಡು ಮಾಡಬಲ್ಲವೆಂದು ತಿಳಿಸುತ್ತೇವೆ.

ಇದುವರೆಗೂ ನಿರ್ಮಾಣ ಸಂಸ್ಥೆಗಳಲ್ಲಿ ಕಾರ್ಯಪರರಾದ ಕಾಂಗ್ರೆಸ್ಸಿನವರನ್ನು ಸೇರಿಸಿಕೊಳ್ಳುತ್ತಿರಲಿಲ್ಲ. ಆದರೆ ಈಗ ಕಾಂಗ್ರೆಸ್ಸೇ ನಿರ್ಮಾಣ ಕೃಷಿಯನ್ನು ಮಾಡಿ ತಿರುಗುತ್ತಿದೆಯಾದುದರಿಂದ ಗ್ರಾಮಾಭ್ಯುದಯಕ್ಕಾಗಿ ತೆಲಸ ಮಾಡಲು ಬಯಸುವವರೆಲ್ಲರೂ ಈ ನಿರ್ಮಾಣ ಸಂಸ್ಥೆಗಳಲ್ಲಿ ಸೇರಿಸಿಕೊಳ್ಳಬಹುದು. ಇಂದಿನಿಂದ ಸ್ವತಂತ್ರ ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ನಿರ್ವಾಹಕ ತರಬೇತು, ನಿರ್ಮಾಣ ಕೃಷಿಗೆ ಜಮೆಯಾಗಬೇಕಾಗಿರುತ್ತದೆ. ಇದುವರೆಗೂ ದೇಶವು ಸ್ವರಾಜ್ಯ ಸಮರದಲ್ಲಿ ನಿಮಗ್ನವಾಗಿದ್ದುದರಿಂದ ಸ್ವಾರ್ಥರಹಿತರಾದ ನಮ್ಮ ಕರ್ಶಣ್ಯರು ಬಹಳ ಮಂದಿ ರಾಜಕೀಯದಲ್ಲಿ ಪ್ರವೇಶಿಸಬೇಕಾಗಿತ್ತು. ಈಗಿ ಹೊಸ ಅವಕಾಶಗಳು ಇವರಿಗೆ ಲಭಿಸುತ್ತಿರುವ ಸಂದರ್ಭದಲ್ಲಿ ಅದೇ ಒಗೆಯಲ್ಲಿ ಉತ್ಸಾಹಶಕ್ತಿಗಳೊಂದಿಗೆ ಪ್ರಜೆಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಉದ್ಯುಕ್ತರಾಗುವರೆಂದು ಕೋರುವೆನು.

92000 ಟನ್ ಧಾನ್ಯ ಬರಲಿದೆ—

ವಾಷಿಂಗ್ಟನ್ ಜೂ 16— ಆ ಗಸ್ಟು ತಿಂಗಳಲ್ಲಿ 92 ಸಾವಿರ ಟನ್ ಧಾನ್ಯವು ಅಮೇರಿಕಾದಿಂದ ಭಾರತಕ್ಕೆ ಬರುವುದು.

ಹೋಟಲು ಮಾಲೀಕರಿಗೆ ಜುಲ್ಮಾನೆ—

ಬಳ್ಳಾರಿ— ಸೆಂಟ್ರಲ್ ಕೊಆಪರೇಟಿವ್ ಸ್ಟೋರ್ಸಿನಿಂದ 143 ಡಬ್ಬ ಹಾಲಿನ ಪುಡಿಯನ್ನು ಕದ್ದ ಆಪಾದನೆಯ ಮೇಲೆ ಇಲ್ಲಿನ 8 ಮಂದಿ ಹೋಟಲು ಮಾಲೀಕರ ದಸ್ತಗಿರಿಯಾಗಿದೆ.

ಸಂಸ್ಥಾನಗಳು ಸ್ವತಂತ್ರವಾಗಿರಬಹುದು

ನವದೆಹಲಿ ಜೂ 17— ಆಳರಸರ ಅಧಿಕಾರ ಮುಗಿದೊಡನೆ, ಭಾರತ ಸಂಸ್ಥಾನಗಳು ಹಿಂದೂಸ್ಥಾನದ ರಾಜ್ಯಾಂಗಕ್ಕಾಗಲೀ ಪಾಕಿಸ್ತಾನದ ರಾಜ್ಯಾಂಗಕ್ಕಾಗಲೀ ಸೇರಲು, ಅಥವಾ ಸ್ವತಂತ್ರವಾಗಿರಲು, ಪೂರ್ಣ ಸ್ವತಂತ್ರವಾಗಿರುತ್ತವೆಂದು ಲೀಗಿನ ಅಧ್ಯಕ್ಷರಾದ ಜಿನ್ನರು ಕೊಟ್ಟಿರುವ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಅರಮನೆ ಸುದ್ದಿ

ಬುಧವಾರ, ಜೂನ್ 18 1947

ಶ್ರೀಮನ್ಮಹಾರಾಜರವರು ಮಿ || ಎಲ್. ಎಚ್. ಬಿರ್ಲಾ ಮತ್ತು ಮಿಸ್ ಇ ಆರ್. ಲೂಕ್ ಇವರುಗಳಿಗೆ ಭೇಟಿ ದಯಪಾಲಿಸಿದರು.

ವಸ್ತು ಪ್ರದರ್ಶನ

ಮೈಸೂರು ಪೌರಸಭೆ ಜುಲೈ 8 ರಿಂದ 12 ನೇ ತಾ | ವರೆಗೆ ವಸ್ತು ಪ್ರದರ್ಶನ ಕಟ್ಟಡದಲ್ಲಿ ಆರೋಗ್ಯ ಮತ್ತು ಲಲಿತ ಕಲೆ ಪ್ರದರ್ಶನವನ್ನೇರ್ಪಡಿಸಿದೆ. ವಿವರಗಳಿಗೆ ಪೌರಸಭೆಯ ಅಧ್ಯಕ್ಷರನ್ನು ವಿಚಾರಿಸಬಹುದು.

ನಾಜೀ ಖೈದಿಗಳು

ಹ್ಯಾಂಬರ್ಗ್ ಜೂ 16— ಆ ಫ್ರಿಕಾದಿಂದ ವಾಪಸ್ಸು ಬರುತ್ತಿರುವ ನಾಜೀ ಖೈದಿಗಳಿಗೆ ಬುದ್ಧಿಭ್ರಮಣೆಯಾಗಿದೆಯೆಂದು ಪ್ರಕಟವಾಗಿದೆ.

ಇಂದಿನ ವರ್ತಮಾನ

ನ್ಯೂಯಾರ್ಕ್ ಜೂ 17— ಗುಡ ನಾಡು ನಾಯಕನಾದ ಮತ್ತು ಬ್ರಿಟಿಷ್ ರೊಡನೆ ಹೋರಾಡಿದ ಇಪೀಫಕೀರನು ಹೆಚ್ಚು ಹೆಚ್ಚಾಗಿ ಬಂಧೂಕ ತಯಾರ್ಮಾಡಿಸುತ್ತಿರುವನೆಂದು ಹೇಳಲಾಗಿದೆ.

ನವದೆಹಲಿ ಜೂ 17— ಗಡಿನಾಡಿನಲ್ಲಿ ತೆಗೆದುಕೊಳ್ಳುವ ರೆಫರೆಂಡಮ್ಮನ್ನು ಎದುರಿಸಲು ಮತ್ತು ಲೀಗಿನ ಚಟುವಟಿಕೆಯ ಮೇಲ್ವಿಚಾರಣೆ ನೋಡಿಕೊಳ್ಳಲು, ಜನ್ನರು ಒಂದು ಸಮಿತಿಯನ್ನು ನೇಮಿಸಿದ್ದಾರೆ.

ಕೊಲಂಬೊ ಜೂ 16 — 'ರಾತ್ರಿ ರೈಲುಗಳ ಮೇಲೆ ಅವಘಡಗಳಾಗುತ್ತಿರುವುದರಿಂದ ರಾತ್ರೆ ಹೊತ್ತು ರೈಲು ಬಿಡುವುದು ನಿಲ್ಲಿಸಲಾಗಿದೆ.

ಟಾಂಲೂಕ್ ಜೂ 16 — ಎಡ್ನಾ ಪುರದ ತೀರದಲ್ಲಿ ಹುಗ್ಲೀ ನದಿಯಲ್ಲಿ ತೇಲುತ್ತಿದ್ದ ಬಾಂಬುಗಳು ತುಂಬಲಟ್ಟಿದ್ದ ಎರಡು ಪೆಟ್ಟಿಗೆಗಳನ್ನು ಹುಡುಗರು ತಂದಿದ್ದಾರೆ.

ನವದೆಹಲಿ ಜೂ 18— ಗಡಿನಾಡಿನ ಸಮಸ್ಯೆ ಬಗ್ಗೆ ಚರ್ಚೆ ನಡೆಸಲು ಗಾಂಧೀಜಿ, ಜಿನ್ನರು, ಗಫಾರ್ ಖಾನರು ಇಂದು ಚಿಕ್ಕ ಸಮ್ಮೇಳನ ನಡೆಸಿದರು.

ಲಾಹೋರು ಜ 17— ನಗರದ ಕೋಮುವಾರು ಗಲಭೆಯಾದ ಒಂದು ಸ್ಥಳಕ್ಕೆ ಗುಜರ್ಖವಾಲಾ ಕಾಂಗ್ರೆಸ್ ಅಧ್ಯಕ್ಷರು ಭೇಟಿಕೊಟ್ಟಾಗ ಅವರ ಮೇಲೆ ಕಲ್ಲುಸೇಟುಗಳು ಬಿದ್ದು ಗಾಯಗೊಂಡು ಮಡಿದರು.

ಕರಾಚಿ ಜೂ 17— ಕರಾಚಿಯಲ್ಲಿ ಗುಡಿಸುವವರು ಹೆಚ್ಚು ಸಂಬಳಬೇಕೆಂದು ಮುಷ್ಕರ ಹೂಡಿದಿರುವರು.

ಸರ್ ಸಿ. ಪಿ. ಹೇಳಿಕೆ

ತಿರುವೇಂದ್ರಂ, ಜೂನ್ 16 — ಬ್ರಿಟೀಷರನ್ನು ನಂಬಿರುವುದು ಕಾಂಗ್ರೆಸ್; ಸಂಸ್ಥಾನಗಳಲ್ಲ ಎಂದು ಸರ್ ಸಿ ಪಿ ರಾಮಸ್ವಾಮಯ್ಯರ್‌ರವರು ಗಾಂಧೀಜೀ ಹೇಳಿಕೆಗೆ ಪ್ರತಿಘಟನಾ ಉತ್ತರ ಎತ್ತಿದ್ದಾರೆ.

ದಿವಾರ್ ರೊಡನೆ ಭೇಟಿ

ಮೈಸೂರು, ಜೂನ್ 14 — ಅಖಿಲ ಕರ್ನಾಟಕ ಮತ್ತು ಮೈಸೂರು ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ಎಂ. ಸಿ. ಮುಲ್ಲಪ್ಪನವರು ಈ ದಿನ ದಿವಾರ್ ಸರ್ ಆರ್ಕಾಟ್‌ರನ್ನು ಭೇಟ ಮಾಡಿದರು ಉತ್ತರ ಕರ್ನಾಟಕಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವ ವಿಚಾರದಲ್ಲಿ ಸೂಕ್ತ ಏರ್ಪಾಟುಗಳನ್ನು ಪರಿಶೀಲಿಸುವುದಾಗಿ ತಿಳಿಸಿದರು.

ಭಟ್ಕಲ್ ಬಂದರಿನ ವಿಚಾರದಲ್ಲಿ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯವರೂ ಬೊಂಬಾಯಿ ಸರ್ಕಾರದವರೂ ವಿರೋಧವನ್ನು ವ್ಯಕ್ತಪಡಿಸಿದಬಗ್ಗೆ ದಿವಾನರು ವಿಷಾದಪಟ್ಟರು.

ಮೈಸೂರು ರಾಜ್ಯಾಂಗ ಸಭೆಯ ಮುಂದಿನ ಅಧಿವೇಶನ ಜರುಗಿತು.

ಮುಂದಿನ ರಾಜಕೀಯ ಸುಧಾರಣೆ ಸಂಬಂಧವಾಗಿ ಪುನಃ ಬೆಂಗಳೂರಿನಲ್ಲಿ ಭೇಟಿ ನಡೆಯಲು ನಿರ್ಧರಿಸಿದೆ.

ಹಿಂದೂ ಮಹಾಸಭೆ

ಕೋಲಾರ, ಜೂನ್ 16 — ಮೈಸೂರು ಸಂಸ್ಥಾನದ ಹಿಂದೂ ಮಹಾಸಭೆ ಆರ್ಗನೈಜಿಂಗ್ ಸೆಕ್ರಟರಿಗಳಾದ ಶ್ರೀ ಎಚ್. ಪುಟ್ಟುವೀರಯ್ಯನವರು ಈ ಜಿಲ್ಲೆಯ ವಿಭಾಗಖಂಡನಿಂದ ಆಹ್ವಾನಿತರಾಗಿ ಜಿಲ್ಲಾ ಪ್ರವಾಸವನ್ನು ಈ ತಿಂಗಳು ಆಖೈರುವರೆಗೆ ಕೈಕೊಂಡಿರುತ್ತಾರೆ. ರಾಬರ್ಟ್‌ಸನ್ ಪೇಟೆಯಲ್ಲಿ ಆರಂಭಿಸಿ ಹಿಂದೂ ಅನಾಥಾಶ್ರಮದ ಕಾರ್ಯಭಾಗಗಳನ್ನು ಮುಂದುವರಿಸಿ ತಕ್ಕ ಸೌಕರ್ಯಗಳನ್ನು ಒದಗಿಸಿಕೊಂಡು ಮುಂದಿನ ತಿಂಗಳಲ್ಲಿ ಆರಂಭಿಸುತ್ತಾರೆ. ಈ ಸಂಬಂಧವಾದ ಈ ಪ್ರವಾಸದಲ್ಲಿ ಹಿಂದೂ ಬಾಂಧವರೆಲ್ಲಾ ಪೂರ್ಣ ಸಹಕಾರವನ್ನಿತ್ತು ಪ್ರೋತ್ಸಾಹಿಸಬೇಕಾಗಿ ಕೋಲಾರ ಜಿಲ್ಲಾ ಹಿಂ || ಮ || ಸಭಾ ಕಾರ್ಯದರ್ಶಿಯವರು ಮನವಿ ಮಾಡಿಕೊಳ್ಳುತ್ತಾರೆ.

ಭಾರತದ ರಾಜರುಗಳು

ಇಂದೂರು ಮಹಾರಾಜರು

ಶ್ರೀ ಯಶ್ವಂತರಾವ ವಯಸ್ಸು 30. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಓದಿದ್ದಾರೆ. ಚಿಕ್ಕವರಿದ್ದಲ್ಲಿ ಸ್ವೀಡಿಶ್ ಅತಿಥಿಗೆ ಬಹುಮಾನವಾಗಿ ಕೊಡಲು ಜೇಬುಗಳಲ್ಲಿ ಬಂಗಾರದ ಕೈಗಡಿಯಾರಗಳನ್ನು ಇಟ್ಟುಕೊಂಡು ತಿರುಗುತ್ತಿದ್ದರು. ಇವರ ವಾರ್ಷಿಕ ಆದಾಯ 45 ಲಕ್ಷ. ಭೋಗ ಜೀವನ. 2 ವರೆ ಕೋಟಿ ರೂ. ವೆಚ್ಚ ಮಾಡಿ ಅರಮನೆಯನ್ನು ಕಟ್ಟಿದರು. 195 ಸಾವಿರ ರೂ. ಬೆಚ್ಚ ಮಾಡಿ ಹಿಂದು ರೈಲ್ವೇ ಕೋಚ್ ಕೊಂಡಿರುವರು. ಅದು ಒಂದು ಚಕ್ರಗಳ ಅರಮನೆ

o o

ಬರೋಡಾ ಮಹಾರಾಜರು

ಗಾಯಕವಾಡರು ಪ್ರಪಂಚದಲ್ಲಿಯ ಐಶ್ವರ್ಯವಂತರಲ್ಲಿ ಎಂಟನೆಯವರೆಂದು ಪ್ರಸಿದ್ಧಿ. ಈತನು ವೈಭೋಗದಲ್ಲಿ ವಿಲಾಸದೊಡನೆ ಜೀವಿಸುತ್ತಾನೆ. ಹಾಲಿವುಡ್ ಸಿನಿಮಾದವರು ಕೂಡ ಕಲ್ಪಿಸಲಾರದ ಭೋಗವು ಅದು ಇವರ ಅರಮನೆಯೊಳಗಿನ ದಾರಿಗಳೆಲ್ಲವೂ ರತ್ನಖಚಿತಗಳಾಗಿವೆ. ಒಂದು ಕಛೇರಿ ಚಾವಡಿಯಲ್ಲಿ ಮಂತ್ರಿಸಭೆ ಜರುಗುತ್ತದೆ. ಇನ್ನು ಳಿವರ ವೈಭವವು ಬಹಳವಾಗಿದೆ.

ಮಹಾ ಘನತೆ ವಹಿಸಿದ ಹೈದರಾಬಾದು ನೈಜಾನುರು

ಇವರು ನೈಷ್ಪಿಕರು. 2600 ಕೋಟಿ ರೂಪಾಯಿಗಳ ಬೆಲೆಯುಳ್ಳ ಆಸ್ತಿಯುಳ್ಳವರು. ಇವರ ಸುತ್ತಮುತ್ತಲೂ ರಾಜಮಂದಿರಗಳಿದ್ದರೂ, ರಾತ್ರಿ ಹೊತ್ತು ತನ್ನ ಮುದ್ದಾದ ಆಡಿನ ಮರಿಯನ್ನು ಪಕ್ಕದಲ್ಲಿಟ್ಟುಕೊಂಡು ಜಗಲಿಯ(ವರಾಂಡ) ಮೇಲೆ ಮಲಗಿಕೊಳ್ಳುತ್ತಾರೆ. ಇವರು ಬಹು ಬುದ್ಧಿಶಾಲಿ. ಧನ ಸಂಚಯವನ್ನು ಮಾಡುತ್ತಲೇ ಇರುತ್ತಾರೆ. ಒರಟಾದ ನೆಯ್ದ ಬಟ್ಟೆಯನ್ನು ಧರಿಸಿ ಒಂದು ಹಳೇ ಫೋರ್ಡ್ ಕಾರಿನಲ್ಲಿ ರಸ್ತೆಗಳಲ್ಲಿ ಸುತ್ತುತ್ತಾರೆ.

o o

ಜಮ್ಮು ಕಾಶ್ಮೀರ ಮಹಾರಾಜರು ಮೊದಲಾದವರು

ವರ್ಷಕ್ಕೆ ಆದಾಯ 260 ಲಕ್ಷ ರೂ. ಈ ಕಾಶ್ಮೀರದ ರಾಜರಿಗೆ.

ವರ್ಷಕ್ಕೆ ರೂ. 60 ಆದಾಯವಿರುವ ಹಳ್ಳಿಗಳ ರಾಜರೂ ಈ ದೇಶದಲ್ಲಿದ್ದಾರೆ

ರಾಜರೆಲ್ಲರಿಗೂ ಅಮೃತಶಿಲೆಯ ಭವನಗಳಿಲ್ಲ. ಕೆಲವರಿಗೆ ಮಣ್ಣಿನ ಗೋಡೆಗಳ ಸಾಧಾರಣ ಗುಡಿಸಲುಗಳೇ ಅರಮನೆಗಳಾಗಿವೆ.

At Opera 9th Glorious Week

RAJAKUMARI

ಟಿ. ಎಸ್. ಬಾಲಯ್ಯ, ಶಶಿಮಣಿದೇವಿ, ಮಾಲತಿ ರಾಮಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ



ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಆರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ವನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

ಐಟಿಯಾಲ್

ಟ್ರೇಡ್ ITL ಮಾರ್ಕ್

ಐಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಬಾಯಿಲೆಯವರ ಕೊಠಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು, ಇತ್ಯಾದಿ ಕೆಲಸಗಳಿಗೆ ನೆರವಾಗುವ ಸಂಸಾರ ಸೇವಕ.

ಹಿತವಾದ ಇದರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

SHAKTI SUDHA

A Superb TONIC

'ಶಕ್ತಿಸುಧಾ' ಸೇವಿಸಿ ಶಕ್ತಿಯನ್ನು ಹೊಂದಿ

Edited, Printed and Publishedby M. S Krishna Rao at the Satyvadi Press Chamara Agrahar, Mysore.